

ಪ್ರತಿ ಕೆಲವು ಕಿಲೋಮೀಟರ್‌ಗೆ ನಿಂತು, ನೀರು ತುಂಬಿಸಿಕೊಳ್ಳುತ್ತಾ ಕ್ರಮಿಸಬೇಕಾಯಿತು. ಈ ರ‍್ಯಾಲಿಯಲ್ಲಿ ಅವರು ಗೆಲ್ಲದಿದ್ದರೂ, ಅವರ ಸಾಹಸ ಎಲ್ಲರ ಗಮನ ಸೆಳೆಯಿತು. 2009ರಲ್ಲಿ ದೀಪಾ 'ಲಿಮ್ಕಾ ಬುಕ್ ಆಫ್ ರೆಕಾರ್ಡ್' ಹೊಕ್ಕರು, ವಿಶೇಷವಾಗಿ ಪರಿವರ್ತನೆಗೊಂಡ ಬೈಕ್ ಓಡಿಸಿದ ಮೊಟ್ಟ ಮೊದಲ ಪ್ಯಾರಪ್ಲೇಜಿಕ್ ಆಗಿ.

ಅವರ ಧೈರ್ಯ ದಿಟ್ಟತನಕ್ಕೆ 'ಟ್ರೂ ಗ್ರಿಟ್ ಟ್ರೋಫಿ' ನೀಡಲಾಯಿತು. ಟ್ರೋಫಿಗಿಂತ ಅವರಿಗೆ ಅತ್ಯಂತ ಸಂತಸ ತಂದ ವಿಷಯವೆಂದರೆ, 'ಇನ್ನು ಮುಂದೆ ದಿವ್ಯಾಂಗರಿಗೂ ರ‍್ಯಾಲಿಯಲ್ಲಿ ಭಾಗವಹಿಸಲು ಅವಕಾಶ ಕೊಡುವುದಾಗಿ' ಆಯೋಜಕರು ಘೋಷಿಸಿದ್ದು. ದೀಪಾ ಭಾರತದಲ್ಲಿ ದಿವ್ಯಾಂಗರಿಗೆ ಮೋಟಾರು ಕ್ರೀಡಾಲೋಕಕ್ಕೆ ಬಾಗಿಲು ತೆರೆದಿದ್ದರು. ದೀಪಾ 'ರ‍್ಯಾಲಿ ಡ್ರೈವರ್ ಲೈಸೆನ್ಸ್' ಪಡೆದ ಮೊಟ್ಟ ಮೊದಲ ದಿವ್ಯಾಂಗ ವ್ಯಕ್ತಿ.

ಮರುವರ್ಷ 2010ರಲ್ಲಿ ದೀಪಾ 'ಡೆಸರ್ಟ್ ಸ್ಟಾರ್ಮ್ ಕಾರ್ ರ‍್ಯಾಲಿ'ಯಲ್ಲಿ ಭಾಗಿಯಾದರು. 'ಡೆಸರ್ಟ್ ಸ್ಟಾರ್ಮ್' ಬಿಕನೇರ್, ಪೋಕ್ರಾನ್, ಜೈಸಲ್‌ಮೇರ್, ರಾಣ್, ಕಚ್ ಪ್ರದೇಶಗಳನ್ನು ಆವರಿಸಿದ ಸುಮಾರು 3000 ಕಿಲೋಮೀಟರಿನ ರ‍್ಯಾಲಿ. ಆರು ದಿನಗಳ ಮರಳುಗಾಡಿನ ಡ್ರೈವಿಂಗ್ ನಂತರ ಉದಯಪುರದಲ್ಲಿ ರ‍್ಯಾಲಿ ಕೊನೆಗೊಂಡಿತ್ತು.

## ನೋವು, ನಿರಾಶೆಗಳ ದಾಟಿ

ದೆಹಲಿಯಲ್ಲಿ, 2010ರಲ್ಲಿ ನಡೆದ 'ಪ್ಯಾರಾ ಕಾಮನ್‌ವೆಲ್ತ್ ಗೇಮ್ಸ್'ನಲ್ಲಿ ದೀಪಾ ಜಾವಲಿನ್ ಎಸೆತ ವಿಭಾಗದಲ್ಲಿ ಸ್ಪರ್ಧಿಸಿದರು. ಅಲ್ಲಿ ಅವರು ಯಾವ ಪದಕವನ್ನೂ ಗೆಲ್ಲಲಿಲ್ಲ. ಆದರೆ ಅಲ್ಲಿವರೆಗೆ ಅಂತರರಾಷ್ಟ್ರೀಯ ಪ್ಯಾರಲಿಂಪಿಕ್ಸ್‌ನಲ್ಲಿ ಇರುವ ಕ್ರೀಡೆಗಳು ಮತ್ತು ಅವುಗಳಿಗೆ ಅರ್ಹತೆ ಗಳಿಸುವ ಪ್ರಕ್ರಿಯೆಗಳ ಬಗ್ಗೆ ಸಾಕಷ್ಟು ತಿಳಿಯಲು ಸಾಧ್ಯವಾಯಿತು. ಕಲಿತದ್ದೆಲ್ಲವನ್ನೂ ಬಳಸಿಕೊಂಡು ಮತ್ತೆರಡೇ ತಿಂಗಳಲ್ಲಿ ಚೀನಾದ ಗ್ವಾಂಗ್ಝು ನಗರದಲ್ಲಿ ನಡೆದ 'ಏಷಿಯಾ ಪ್ಯಾರಾ ಗೇಮ್ಸ್ 2010'ರಲ್ಲಿ ಕಂಚಿನ ಪದಕವನ್ನು ಗೆದ್ದರು. ಲ್ಲಿಂದ ಮುಂದೆ ಅನೇಕ ವಿಶ್ವದಾಖಲೆಗಳು; ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕಗಳನ್ನು ಗಳಿಸಿದರು. 2011ರಲ್ಲಿ ನ್ಯೂಜಿಲ್ಯಾಂಡ್‌ನಲ್ಲಿ ನಡೆದ 'ಐಪಿಸಿ ವರ್ಲ್ಡ್ ಚಾಂಪಿಯನ್‌ಶಿಪ್ಸ್'ನಲ್ಲಿ ಶಾಟ್‌ಪುಟ್‌ನಲ್ಲಿ ಬೆಳ್ಳಿಯ ಪದಕ ಪಡೆದರು. ಅಲ್ಲಿ ಚಾಂಪಿಯನ್‌ಶಿಪ್ಸ್‌ನಲ್ಲಿ ಗೆದ್ದವರು ಲಂಡನ್‌ನ ಪ್ಯಾರಲಿಂಪಿಕ್ಸ್‌ಗೆ ಪ್ರವೇಶಿಸಲು ಅರ್ಹತೆ ಪಡೆಯುತ್ತಾರೆ.

2012ರಲ್ಲಿ ಲಂಡನ್‌ನಲ್ಲಿ ನಡೆಯಲಿದ್ದ ಪ್ಯಾರಲಿಂಪಿಕ್ಸ್‌ನಲ್ಲಿ ದೀಪಾ ಭಾರತದ ಮೊಟ್ಟ ಮೊದಲ ಮಹಿಳಾ ಪ್ಯಾರಲಿಂಪಿಯನ್ ಆಗಿ ಹೋಗುವವರೆಂದು ಎಲ್ಲರ ನಿರೀಕ್ಷೆ ಇತ್ತು. ಆದರೆ ಭಾರತದ 'ಪ್ಯಾರಲಿಂಪಿಕ್ಸ್ ಕಮಿಟಿ' ಆಕೆಯ ವೀಸಾ ಪತ್ರಗಳನ್ನು ಸರಿಯಾದ ಸಮಯಕ್ಕೆ ಕಳುಹಿಸಿರಲಿಲ್ಲ;

ಪತಿ ಮತ್ತು ಮಕ್ಕಳೊಡನೆ ದೀಪಾ ಮಲ್ಲಿಕ್